### ಬಸವ ಜಯಂತಿ, ಅಕ್ಷಯ ತೃತೀಯ ಹಬ್ಬ: ಗ್ರಾಹಕರಿಗೆ ವಿಶೇಷ ಕೊಡುಗೆ

# ಈಶ್ವರಿ ಗೋಲ್ಡ್‌ನಲ್ಲಿ ಆಭರಣಗಳ ಮೆರುಗು

ಹುಬ್ಬಳ್ಳಿ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಈಶ್ವರಿ ಗೋಲ್ಡ್ ಆಭರಣ ಮಾರಾಟ ಮಳಿಗೆ ನೋಟ.

**ಹುಬ್ಬಳ್ಳಿ:** ಭಾರತೀಯ ಸಂಪ್ರದಾಯದಲ್ಲಿ ಹಬ್ಬಗಳಿಗೆ ವಿಶೇಷ ಪ್ರಾಮುಖ್ಯತೆ ಇದೆ. ಅದರಲ್ಲೂ ಅಕ್ಷಯ ತೃತೀಯ ಬಸವ ಜಯಂತಿಯಂದು ಚಿನ್ನ ಆಭರಣ ಖರೀದಿ ಮಾಡುವ ಮೂಲಕ ಪರಂಪರೆ ಬೆಳೆಸುವುದ ಹಲವರ ವಾಡಿಕೆ. ಹೀಗಾಗಿ ನಗರದ ಸ್ಟೇಷನ್ ರಸ್ತೆಯಲ್ಲಿರುವ ಈಶ್ವರಿ ಗೋಲ್ಡ್‌ನಲ್ಲಿ ಅಕ್ಷಯ ತೃತೀಯ ಬಸವ ಜಯಂತಿ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ವಿಶೇಷ ಕೊಡುಗೆಗಳೊಂದಿಗೆ ವೈವಿಧ್ಯಮಯ ಆಭರಣಗಳನ್ನು ನೀಡಿ, ಹಬ್ಬಕ್ಕೆ ಮೆರುಗು ನೀಡಲು ಮುಂದಾಗಿದೆ.

ಎಲ್ಲಾ ಚಿನ್ನದ ಆಭರಣಗಳ ಮೇಲೆ ಈಶ್ವರಿ ಗೋಲ್ಡ್ ಯಾವುದೇ ಷರತ್ತುಗಳಿಲ್ಲದೆ ತಯಾರಿಕಾ ವೆಚ್ಚದ ಮೇಲೆ ಕೇವಲ ಶೇ.6.66 ಮೇಕಿಂಗ್ ಚಾರ್ಜ್ ಕೊಡುತ್ತಿದ್ದಾರೆ. ಮತ್ತು 100ಗ್ರಾಂ. ಖರೀದಿಸಿದಲ್ಲಿ ಅವರಿಗೆ 1 ಚಿನ್ನದ ಪ್ರೇಮ್ ಉಡುಗೊರೆಯನ್ನು ನೀಡಲಾಗುತ್ತದೆ. ಮತ್ತು 25 ಗ್ರಾಂ. ಮೇಲ್ಪಟ್ಟ ಖರೀದಿ ಮೇಲೆ ಉಚಿತ ಆರೋಗ್ಯ ವಿಮೆ ಮತ್ತು ಮಹಿಳೆಯರ ಲೆದರ್ ವ್ಯಾನಿಟಿ ಬ್ಯಾಗ್‌ಗಳನ್ನು ನೀಡಲಾಗುತ್ತದೆ. ದರ ಏರಿಕೆಯ ಈ ಸಂದರ್ಭದಲ್ಲಿ ಅತ್ಯಂತ ಯೋಗ್ಯ ಬೆಲೆಯಲ್ಲಿ ಇತರೆ ಜ್ಯುವೆಲರ್‌ಗಿಂತ ಅತ್ಯಂತ ಕಡಿಮೆ ಬೆಲೆಯಲ್ಲಿ ನಿಮಗೆ ಈ ಕೊಡುಗೆ ನೀಡಲಾಗುತ್ತಿದೆ.

> ವಾಣಿಜ್ಯನಗರಿ ಹುಬ್ಬಳ್ಳಿಯಲ್ಲಿರುವ ನಮ್ಮ ಈಶ್ವರಿ ಗೋಲ್ಡ್ ಆಭರಣ ಮಳಿಗೆಯು ಉತ್ತರ ಕರ್ನಾಟಕದಲ್ಲಿ ಭಾರಿ ಹೆಸರು ಮಾಡಿದ್ದು ನಾವು ಜನರಿಗೆ 22 ಕ್ಯಾರೆಟ್ ಆಭರಣಗಳನ್ನು 91.6 ಹಾಲ್‌ಮಾರ್ಕ್ ಮತ್ತು ಎಚ್‌ಯುಐಡಿ ಕೋಡ್‌ನೊಂದಿಗೆ ಜನರಿಗೆ ಯೋಗ್ಯ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದೇವೆ. ನಮ್ಮಲ್ಲಿ ಎಲ್ಲಾ ರೀತಿಯ ಆಭರಣಗಳ ಸಂಗ್ರಹವಿದೆ.
>
> ■ **ಮಂಜುನಾಥ ಎಸ್. ಗುಂಜಳ,**
> | ಎಂ.ಡಿ. ಈಶ್ವರಿ ಗೋಲ್ಡ್, ಹುಬ್ಬಳ್ಳಿ

# ಪುಷ್ಪದಂತೆ ಸಂಗ್ರಾಣಿ ಕಲ್ಲು ಎತ್ತಿದ ಬಲಭೀಮರು..!

**ಹುಬ್ಬಳ್ಳಿ:** ಕಿಲೋಗಟ್ಟಲೇ ಭಾರವಾದ ಸಂಗ್ರಾಣಿ ಕಲ್ಲುಗಳನ್ನು ಹೂವಿನಷ್ಟೇ ಸರಾಗವಾಗಿ ಎತ್ತುವ ಮೂಲಕ ನೆರೆದ ಸಭಿಕರನ್ನು ಸಾಹಸ ಲೋಕಕ್ಕೆ ಕರೆದುಕೊಂಡು ಹೋಗುವಲ್ಲಿ ಆಧುನಿಕ ಬಲಭೀಮರು ಯಶಸ್ವಿಯಾದರು.

ಶ್ರೀನಿವಾಸ ಕಾಡರಕೊಪ್ಪ, ಅಭಿಷೇಕ ಕಾಡರಕೊಪ್ಪ ಕಿಲೋಗಟ್ಟಲೇ ಭಾರದ ಸಂಗ್ರಾಣಿ ಕಲ್ಲುಗಳನ್ನು ಸರಾಗವಾಗಿ ಎತ್ತಿ ಸಾಹಸ ಲೋಕದಲ್ಲಿ ವಿಹರಿಸುವಂತೆ ಮಾಡಿದರು. 20,25, 50 ಹಾಗೂ ಕೊನೆಗೆ 95 ಕೆಜಿ ತೂಕದ ಸಂಗ್ರಾಣಿ ಕಲ್ಲನ್ನು ಎತ್ತುವ ಮೂಲಕ ಅಗ್ರಸ್ಥಾನ ಭಾಜನರಾದರು. ಅಭಿಷೇಕ ಕಾಡರಕೊಪ್ಪ ಸಹ ತಾವು ಯಾವುದಕ್ಕೂ ಕಮ್ಮಿ ಇಲ್ಲದಂತೆ ಕಿಲೋಗಟ್ಟಲೇ ಸಂಗ್ರಾಣಿ ಕಲ್ಲುಗಳನ್ನು ಎತ್ತಿದರು. 85 ಕೆಜಿ ತೂಕದ ಸಂಗ್ರಾಣಿ ಕಲ್ಲು ಎತ್ತಿ ಗಮನ ಸೆಳೆದರು. ಸಿದ್ಧಾರೂಢರ ಸನ್ನಿಧಿಯ ಆವರಣದಲ್ಲಿ ನಡೆದ ಈ ರೋಚಕ ಹಾಗೂ ರೋಮಾಚಂನಕಾರಿ ಸಾಹಸ ಪ್ರದರ್ಶನ ಗಮನ ಸೆಳೆಯಿತು.

ಪೈಲ್ವಾನ್ ಪಾಂಡು ಚೆನ್ನಪ್ಪ ಮಾದರ ನೇತೃತ್ವದಲ್ಲಿ ಭಾರಿ ಭಾರದ ಸಂಗ್ರಾಣಿ ಕಲ್ಲುಗಳನ್ನು ಎತ್ತಿದ ಶ್ರೀನಿವಾಸ ಕಾಡರಕೊಪ್ಪ, ಅಭಿಷೇಕ ಕಾಡರಕೊಪ್ಪ ಜನಮನ ಬೆರಗುಗೊಳಿಸಿದರು. ಶ್ರೀ ಸಿದ್ಧಾರೂಢಮಠ ಟ್ರಸ್ಟ್ ಕಮೀಟಿಯ ನೂತನ ಅಧ್ಯಕ್ಷ ಬಾಳು ಮಗಜಿಕೊಂಡಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸದಾನಂದ ಡಂಗನವರ ಇದ್ದರು.

### ಭಾರ ಎತ್ತುವ ಮೂಲಕವೇ ಚಾಲನೆ

ಶ್ರೀ ಸಿದ್ಧಾರೂಢ ಟ್ರಸ್ಟ್ ಕಮೀಟಿ ಅಧ್ಯಕ್ಷ ಬಾಳು ಮಗಜಿಕೊಂಡಿ ಸಾಹಸ ಪ್ರದರ್ಶನಕ್ಕೆ ಭಾರ ಎತ್ತುವ ಮೂಲಕವೇ ಚಾಲನೆ ನೀಡಿದರು. ಇದಕ್ಕೆ ಕಾಂಗ್ರೆಸ್ ಮುಖಂಡ ಸದಾನಂದ ಡಂಗನವರ ಸಾಥ್ ನೀಡಿದರು. ಈ ವೇಳೆ ಮಾತನಾಡಿದ ಶ್ರೀ ಸಿದ್ಧಾರೂಢ ಟ್ರಸ್ಟ್ ಕಮೀಟಿ ಅಧ್ಯಕ್ಷ ಬಾಳು ಮಗಜಿಕೊಂಡಿ, ಈ ದೇಶಿ ಕ್ರೀಡೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಯುಕ್ತ ಕರ್ನಾಟಕ ಬಳಗ ಸಾಹಸ ಪ್ರದರ್ಶನ ಆಯೋಜಿಸಿರುವುದು ಸಂತೋಷ ತಂದಿದೆ ಎಂದರು. ಪಾಲಿಕೆ ಮಾಜಿ ಸದಸ್ಯ ಶಿವಾನಂದ ಮುತ್ತಣ್ಣವರ, ಶ್ರೀ ಸಿದ್ಧಾರೂಢ ಟ್ರಸ್ಟ್ ಕಮೀಟಿ ಧರ್ಮದರ್ಶಿಗಳಾದ ಉದಯ ನಾಯಕ, ವಿ.ಡಿ. ಕಾಮರೆಡ್ಡಿ ಪಾಲ್ಗೊಂಡಿದ್ದರು. ಪೈಲ್ವಾನ್ ಪಾಂಡು ಚೆನ್ನಪ್ಪ ಮಾದರ ನೇತೃತ್ವದ ತಂಡ ಶ್ರೀನಿವಾಸ ಕೊಡರಕೊಪ್ಪಅಭಿಷೇಕ ಕೊಡರಕೊಪ್ಪ ಬಲಭೀಮರಂತೆ ಭಾರ ಎತ್ತುವ ಮೂಲಕ ಗಮನ ಸೆಳೆದರು.

# ಇಸ್ಮಾಯಿಲ್ ತಮಟಗಾರಗೆ ಬಂಧನದ ಭೀತಿ...?

**ಫೈರೋಜ್ ಕೊಲೆ ಪ್ರಕರಣ**

**ಧಾರವಾಡ:** ಇಲ್ಲಿಯ ಹಾತ್ಮಿನಗರದಲ್ಲಿ ನಡೆದ ಕಾಂಗ್ರೆಸ್ ಯುವ ಮುಖಂಡ ಫೈರೋಜ್ ಪಠಾಣ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪನಗರ ಠಾಣೆ ಪೊಲೀಸರು ಮತ್ತೆ ಮೂವರನ್ನು ವಶಕ್ಕೆ ಪಡೆದಿದ್ದು, ಪ್ರಕರಣದಲ್ಲಿ ಅಂಜುಮನ್ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಹೆಸರು ಕೇಳಿಬಂದಿದ್ದು, ಅವರಿಗೂ ಬಂಧನದ ಭೀತಿ ಎದುರಾಗಿದೆ.

ಪಠಾಣ ಕೊಲೆ ಪ್ರಕರಣದಲ್ಲಿ 5 ಜನ ನೇರವಾಗಿ ಭಾಗಿಯಾಗಿದ್ದರೆ ಹಲವರು ಪರೋಕ್ಷವಾಗಿ ಆರೋಪಿಗಳಾಗಿದ್ದರು ಎಂಬ ಮಾತುಗಳು ಕೇಳಿಬಂದಿದ್ದವು. ಇದಕ್ಕೆ ಸಂಬಂಧಿಸಿದಂತೆ ಶನಿವಾರ ಮೈನುದ್ದೀನ್, ಸಾಗರ್, ಅಲ್ಲಾವುದ್ದೀನ್ ಎಂಬುವವರನ್ನು ಬಂಧಿಸಲಾಗಿದ್ದು, ಸದ್ಯ ಬಂಧಿತರ ಸಂಖ್ಯೆ 12ಕ್ಕೆ ಏರಿದೆ. ಇನ್ನೂ ಹಲವರನ್ನು ಬಂಧಿಸುವ ಸಾಧ್ಯತೆ ಇದ್ದು, ಇದಕ್ಕಾಗಿ 4 ತಂಡಗಳನ್ನು ರಚಿಸಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಹು-ಧಾ ಮಹಾನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಹತ್ಯೆ ಪ್ರಕರಣದಲ್ಲಿ ನೇರವಾಗಿ ಭಾಗಿಯಾದ ಆರೋಪಿಗಳನ್ನು ಬಂಧಿಸಲಾಗಿದೆ. ತನಿಖೆ ಪ್ರಗತಿಯಲ್ಲಿದ್ದು, ಈ ಹತ್ಯೆ ಹಿಂದೆ ಇದ್ದವರು ಯಾರು? ಸಂಚು ರೂಪಿಸಿದ್ದು ಯಾರು? ಇದ್ದಾರೆಂದು ಮೂಲ ಬೇರು ಶೋಧಿಸಲಾಗುತ್ತಿದೆ. ತನಿಖೆ ಮುಗಿದ ನಂತರ ಸಂಪೂರ್ಣ ಮಾಹಿತಿ ಒದಗಿಸಲಾಗುವುದು ಎಂದರು.

ಫೈರೋಜ್ ಹತ್ಯೆ ರಾಜಕೀಯ ಸೇರಿದಂತೆ ವೈಯಕ್ತಿಕ ಪ್ರಗತಿಗಾಗಿ ನಡೆದಿದೆ. ಪ್ರಕರಣವನ್ನು ಎಲ್ಲ ಆಯಾಮದಲ್ಲೂ ಕೂಡ ತನಿಖೆ ನಡೆಸುತ್ತಿದೆ. ಪ್ರತ್ಯೇಕ ಹಾಗೂ ಪರೋಕ್ಷವಾಗಿ ಯಾರೇ ಭಾಗಿಯಾಗಿದ್ದರೂ, ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಸಹ ಬಿಡುವುದಿಲ್ಲ. ಹತ್ಯೆಗೆ ಬೆಂಬಲಿಸಿದ ಎಲ್ಲರನ್ನೂ ವಶಕ್ಕೆ ತೆಗೆದುಕೊಳ್ಳುತ್ತೇವೆ ಎಂದರು.

ಫೈರೋಜ್ ಕೊಲೆ ಕೇಸ್ ನಡೆದ ಮರುದಿನವೇ ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಅವರದ್ದೇನ್ನಲಾದ ಆಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಇದು ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಈ ಹಿನ್ನೆಲೆಯಲ್ಲಿ ಅವರಿಗೂ ಬಂಧನದ ಭೀತಿ ಎದುರಾಗಿದೆ.

# ಜ್ಯೋತಿಷ್ಯ. ವಾಸ್ತು ಕಾರ್ಯಾಗಾರ

**ಹುಬ್ಬಳ್ಳಿ:** ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲಾ ಮತ್ತು ಧಾರವಾಡ ಪಂಚಾಂಗ ಸಮಿತಿ ಹಾಗೂ ಕರ್ನಾಟಕ ಜ್ಯೋತಿಷಿಗಳ ಒಕ್ಕೂಟ ಧಾರವಾಡ ಸಂಯುಕ್ತ ಆಶ್ರಯದಲ್ಲಿ ಏ.19ರಂದು ಜ್ಯೋತಿಷ್ಯ ಹಾಗೂ ವಾಸ್ತು ಕಾರ್ಯಾಗಾರವನ್ನು ಧಾರವಾಡದ ಗಾಂಧಿ ಚೌಕ ಬಳಿಯ ಸಂಸ್ಕೃತ ಪಾಠಶಾಲಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸುರೇಶ ಕೊಪ್ಪರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಜ್ಯೋತಿಷ್ಯ ಹಾಗೂ ವಾಸ್ತು ಕಾರ್ಯಾಗಾರ ನಡೆಯಲಿದೆ. ಉದ್ಘಾಟನೆಯನ್ನು ಡಾ.ಜಿ.ಎಚ್.ಇಮ್ರಾಪೂರ ಮಾಡಲಿದ್ದಾರೆ. ಅತಿಥಿಗಳಾಗಿ ನರಸಿಂಹರಾವ್ ಸೋಮಲಾಪುರ ಮುಂತಾದವರು ಆಗಮಿಸಲಿದ್ದಾರೆ ಎಂದರು.

ಬಸವರಾಜ ಕುರಬೇಟ, ಎನ್.ಎಮ್.ಮಂಗಳೂರ, ಡಾ.ಆನಂದ ಹಂದಿಗೋಳ, ಸುರೇಶ ಕೊಪ್ಪರ ಉಪನ್ಯಾಸ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ ಎಂದರು. ಮಧ್ಯಾಹ್ನ 3 ರಿಂದ 5 ರವರೆಗೆ ಸಾರ್ವಜನಿಕರ ಜ್ಯೋತಿಷ್ಯ ಹಾಗೂ ವಾಸ್ತು ಸಮಸ್ಯೆಗಳಿಗೆ ತಜ್ಞರು ಉಚಿತವಾಗಿ ಸಲಹೆ ನೀಡಲಿದ್ದಾರೆ ಎಂದು ತಿಳಿಸಿದರು. ಸತ್ಯನಾರಾಯಣ ಎಮ್, ಎನ್.ಎಮ್. ಮಂಗಳೂರು, ಡಾ.ಆನಂದ ಹಂದಿಗೋಳ, ಮಹಾರುದ್ರ ಬಡಿಗೇರ ಇದ್ದರು.

## ಗಣ್ಯರಿಗೆ ಸನ್ಮಾನ ಇಂದು

**ಹುಬ್ಬಳ್ಳಿ:** ಡಾ.ಅಂಬೇಡ್ಕರರವರ 135ನೇ ಜಯಂತಿ ಅಂಗವಾಗಿ ವಿವಿಧ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲು ಅರವಿಂದ ನಗರದ ಬಿಜೆಪಿ ಕಾರ್ಯಾಲಯದಲ್ಲಿ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ಅವರ ಅಧ್ಯಕ್ಷತೆಯಲ್ಲಿ ವಿವಿಧ ಪ್ರಮುಖರ ಸಭೆಯಲ್ಲಿ ಎ.19ರಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸುಮಾರು 30 ಜನ ಗಣ್ಯರಿಗೆ ಗೌರವ ಸನ್ಮಾನ ಮಾಡುವುದಾಗಿ ನಿರ್ಧರಿಸಲಾಯಿತು. ಶಿಕ್ಷಕ ಮಾರುತಿ ಕಟ್ಟಿಮನಿ ಅವರು ಉಪಾನ್ಯಾಸ ನೀಡುವರು. ಡಾ.ಬಾಬಾಸಾಹೇಬ ಅವರ ಜೀವನ ಚರಿತ್ರೆ, ಹೋರಾಟ ಎಲ್.ಇ.ಡಿ. ಮುಖಾಂತರ ಪ್ರದರ್ಶನ ಮಾಡಲಾಗುವುದು. ಡಾ.ಬಾಬಾ ಸಾಹೇಬರ ಪ್ರಮುಖ ಭಾವಚಿತ್ರಗಳ ಪ್ರದರ್ಶನ, ಕೇಂದ್ರ ಸರ್ಕಾರವು ಡಾ.ಬಾಬಾ ಸಾಹೇಬರ ಹೆಸರಿನ ನೆನಪಿಗೆ ಮಾಡಲಾದ ಮಹಾನ ಕಾರ್ಯಗಳ, ಚಿತ್ರಪಟಗಳು ಮತ್ತು ತಲೆಬರಹಗಳ ಅನಾವರಣ ಮಾಡ ಲಾಗುವುದು ಎಂದು ತಿಪ್ಪಣ್ಣ ಮಜ್ಜಗಿ ಹೇಳಿದರು. ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಹಾನಗರ ಪಾಲಿಕೆ ಸದಸ್ಯರು, ಮಾಜಿ ಶಾಸಕರು, ರಾಜ್ಯ ಪದಾಧಿಕಾರಿಗಳು ಭಾಗವಹಿಸುವರು ಎಂದು ತಿಳಿಸಿದರು.

## ಅಕ್ರಮ ಗೋಮಾಂಸ ವಶ

**ಧಾರವಾಡ:** ಬೆಳಗಾವಿಯಿಂದ ಹುಬ್ಬಳ್ಳಿ ಕಡೆಗೆ ಸಾಗಿಸುತ್ತಿದ್ದ ಅಕ್ರಮ ಗೋಮಾಂಸದ ವಾಹನವನ್ನು ತಡೆದ ಬಜರಂಗ ದಳದ ಕಾರ್ಯಕರ್ತರು ಗ್ರಾಮೀಣ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಬೆಳಗಾವಿಯಿಂದ ಹುಬ್ಬಳ್ಳಿಗೆ ಸುಮಾರು 5 ಟನ್ ಅಕ್ರಮ ಗೋಮಾಂಸವನ್ನು ಟ್ರಕ್‌ವೊಂದರಲ್ಲಿ ಸಾಗಾಟ ಮಾಡಲಾಗುತ್ತಿತ್ತು. ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಇಲ್ಲಿಯ ನರೇಂದ್ರ ಟೋಲ್ ಬಳಿ ವಾಹನ ತಡೆದ ಬಜರಂಗ ದಳದ ಕಾರ್ಯಕರ್ತರು ತಪಾಸಣೆ ಮಾಡಿದಾಗ ಅಕ್ರಮ ಗೋಮಾಂಸ ಇರುವುದು ಬೆಳಕಿಗೆ ಬಂದಿದೆ. ತಕ್ಷಣ ಈ ಕುರಿತು ಗ್ರಾಮೀಣ ಠಾಣೆ ಪೊಲೀಸರಿಗೆ ಮಾಹಿತಿ ಒದಗಿಸಿ ಅವರಿಗೆ ಒಪ್ಪಿಸಿದ್ದಾರೆ. ಕಾರ್ಯಕರ್ತರಾದ ಗಣೇಶ, ಧ್ರುವ, ಶುಭಂ, ಬಸು ಇತರರು ಇದ್ದರು. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬೆಂಕ್ ಆಫ್ ಬರೋಡ**
**Bank of Baroda**

**ಬ್ಯಾಂಕ್ ಆಫ್ ಬರೋಡ**
ಪ್ರಾದೇಶಿಕ ಕಛೇರಿ ಒತ್ತಡಕ್ಕೊಳಪಟ್ಟ ಸ್ವತ್ತುಗಳ ರಿಕವರಿ ಶಾಖೆ, ಹುಬ್ಬಳ್ಳಿ
2ನೇ ಮಹಡಿ, ಬೆಲ್ಲದ ಟವರ್ಸ್, ಬನ್ನಿಗಿಡ ಸ್ಟಾಪ್, ಗೋಕಲ ರಸ್ತೆ,
ಹುಬ್ಬಳ್ಳಿ-580030, ಕರ್ನಾಟಕ
ಇ-ಮೇಲ್: sarhub@bankofbaroda.com

**ಇ-ಹರಾಜು ಮಾರಾಟ ಸೂಚನೆ**

[ಅನುಬಂಧ-II ಎ ನಿಯಮ 6(2)ರೊಂದಿಗೆ ಚರಾಸ್ತಿಗಾಗಿ] [ಅನುಬಂಧ-IV-ಎ ಸ್ಥಿರಾಸ್ತಿಗಾಗಿ 8(6)ರ ಸೊಬಂಧನೆಯನ್ನು ಉಲ್ಲೇಖಿಸಿ]

**2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.**

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಧಾರ್ಜನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಹಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ-ಹರಾಜ